# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಂಚಾರ ಆಚರಣೆ ಶಾಖೆ: ಕೇಂದ್ರ ಕಛೇರಿ: 2ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ: ಬೆಂಗಳೂರು-27.

ಸಂಖ್ಯೆ: ಬೆಂಮಸಾಸಂ: ಕೇಕ: ಸಂಚಾರ: ಆ: ಶಾ-2: ಟಿ: 1504: 2021-22 ದಿನಾಂಕ:15.12.2021

## ಕಛೇರಿ ಆದೇಶ

**ವಿಷಯ:** ವಿದ್ಯಾರ್ಥಿಗಳು ಸಂಸ್ಥೆಯ ಸೇವೆಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸುವ ಬಗ್ಗೆ.

**ಉಲ್ಲೇಖ:** 1) ಸಂ:ಬೆಂಮಸಾಸಂ:ಕೇಕ:ಸಂಚಾರ:ಆಶಾ-2: ಟಿ: 1373: 2021-22 ದಿ:30.11.2021

\-\-\-\-\-\-

2021-22ನೇ ಶೈಕ್ಷಣಿಕ ಸಾಲಿನ ತರಗತಿಗಳನ್ನು ಸರ್ಕಾರದ ನಿರ್ದೇಶನದಂತೆ ಶಾಲಾ/ಕಾಲೇಜುಗಳು ಪ್ರಾರಂಭ ಮಾಡಿರುತ್ತವೆ. ತತ್ಸಂಬಂಧ ಸಂಸ್ಥೆಯು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದಿನಾಂಕ 14.11.2021 ರಿಂದ ವಿದ್ಯಾರ್ಥಿ ಪಾಸುಗಳನ್ನು ವಿತರಣೆ ಮಾಡಲು ಕ್ರಮ ಕೈಗೊಂಡಿರುತ್ತದೆ. ಅದರಂತೆ ವಿದ್ಯಾರ್ಥಿಗಳು ಪಾಸಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದು, ಇಲ್ಲಿಯವರೆಗೂ ಸುಮಾರು 80000 ವಿದ್ಯಾರ್ಥಿಗಳು ಪಾಸುಗಳನ್ನು ಪಡೆದಿರುತ್ತಾರೆ. ಉಳಿದಂತೆ ಪಾಸಿಗಾಗಿ ಅರ್ಜಿ ಸಲ್ಲಿಸಿರುವ/ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪಾಸು ಪಡೆಯಲು ಸಮಯಾವಕಾಶ ನೀಡುವ ಸಲುವಾಗಿ, ಸಂಸ್ಥೆಯ ಸೇವೆಗಳಲ್ಲಿ ಪ್ರಯಾಣಿಸಲು ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ.

| ಕ್ರ.ಸಂ | ವಿದ್ಯಾರ್ಥಿ ವರ್ಗ | ಪ್ರಯಾಣದ ಸೌಲಭ್ಯ (ವಾಸಸ್ಥಳದಿಂದ ಶಾಲಾ/ಕಾಲೇಜಿನ ವರೆಗೆ) |
|---|---|---|
| 1 | 1 ರಿಂದ 10ನೇ ತರಗತಿ, ಪಿ.ಯು.ಸಿ (11+12), ಐಟಿಐ, ಡಿಪ್ಲೋಮ, ವೃತ್ತಿಪರ, ಪದವಿ, ಸ್ನಾತಕೋತ್ತರ, ತಾಂತ್ರಿಕ & ವೈದ್ಯಕೀಯ, ಸಂಜೆ ಕಾಲೇಜು ಹಾಗೂ ಪಿ.ಹೆಚ್.ಡಿ. ವಿದ್ಯಾರ್ಥಿಗಳು. | ಸದರಿ ವಿದ್ಯಾರ್ಥಿಗಳು 2021-22 ನೇ ಸಾಲಿನ ಶಾಲಾ/ಕಾಲೇಜಿನ ಶುಲ್ಕ ರಸೀದಿ ಅಥವಾ ಶಾಲಾ/ಕಾಲೇಜಿನ ಗುರುತಿನ ಚೀಟಿಯೊಂದಿಗೆ ದಿನಾಂಕ 31.12.2021 ರವರೆಗೆ ಮಾತ್ರ ಪ್ರಯಾಣಿಸಲು ಅವಕಾಶ ಕಲ್ಪಿಸಿದೆ. |

ಮೇಲ್ಕಂಡಂತೆ ವಿದ್ಯಾರ್ಥಿಗಳಿಗೆ ಒದಗಿಸಿರುವ ಪ್ರಯಾಣ ಸೌಲಭ್ಯದ ಬಗ್ಗೆ ಎಲ್ಲಾ ಚಾಲನಾ ಸಿಬ್ಬಂದಿಗಳಿಗೆ ಸೂಕ್ತ ಮಾಹಿತಿ ಒದಗಿಸಲು ಮತ್ತು ಘಟಕಗಳ/ಬಸ್ ನಿಲ್ದಾಣಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ವಿಭಾಗೀಯ ನಿಯಂತ್ರಣಾಧಿಕಾರಿಗಳು/ ಘಟಕ ವ್ಯವಸ್ಥಾಪಕರು ಕ್ರಮ ಕೈಗೊಳ್ಳುವುದು.

ಮುಖ್ಯ ಸಂಚಾರ ವ್ಯವಸ್ಥಾಪಕರು(ಆ)

ಬೆಂ.ಮ.ಸಾ.ಸಂಸ್ಥೆ.

**ಪ್ರತಿಯನ್ನು ಗೌರವಪೂರ್ವಕವಾಗಿ,**

1. ಆಪ್ತ ಕಾರ್ಯದರ್ಶಿಯವರು, ಅಧ್ಯಕ್ಷರು & ಉಪಾಧ್ಯಕ್ಷರು ಬೆಂ.ಮ.ಸಾ.ಸಂಸ್ಥೆ ರವರಿಗೆ ಮಾನ್ಯ ಅಧ್ಯಕ್ಷರ & ಉಪಾಧ್ಯಕ್ಷರ ಗಮನಕ್ಕೆ ತರಲು ಕೋರಲಾಗಿದೆ.
2. ಆಪ್ತ ಸಹಾಯಕರು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ಮಾನ್ಯ ನಿರ್ದೇಶಕರು (ಮಾತಂ) ಬೆಂ.ಮ.ಸಾ.ಸಂಸ್ಥೆ ರವರ ಕಛೇರಿಗೆ ಹಾಗೂ ಮೇಲಿನ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕಳುಹಿಸಲಾಗಿದೆ.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
4. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು/ ವಿಭಾಗೀಯ ಸಂಚಾರ ಅಧಿಕಾರಿಗಳು/ ಘಟಕ ವ್ಯವಸ್ಥಾಪಕರುಗಳು/ ಬಸ್ ನಿಲ್ದಾಣಾಧಿಕಾರಿಗಳು ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.